# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 252
ಉತ್ತರಿಸಬೇಕಾದ ದಿನಾಂಕ : 15.02.2023
ಸದಸ್ಯರ ಹೆಸರು : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸರ್ವೋಚ್ಚ ನ್ಯಾಯಾಲಯ / ಉಚ್ಚ ನ್ಯಾಯಾಲಯ/ಕೆ ಎ ಟಿ/ಜಿಲ್ಲಾ ಮಟ್ಟದ ಸಿಎಲ್ ನ್ಯಾಯಾಲಯಗಳು ಹೊರಡಿಸುವ ಆದೇಶಗಳನ್ನು ಅನುಷ್ಠಾನ ಗೊಳಿಸಲು ತಹಶೀಲ್ದಾರ್ ಕಚೇರಿಗಳಲ್ಲಿ ರೈತಾಪಿ ವರ್ಗದ ಜನರನ್ನು ವಿನಾ ಕಾರಣ ಅಲೆದಾಡಿಸಿ ವಿಳಂಬ ಮಾಡುತ್ತಾರೆ ಎಂಬ ಉದ್ದೇಶದಿಂದ ಸರ್ಕಾರವು ಕೋರ್ಟ್ ಮಾಡ್ಯೂಲ್ ಎಂಬ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಮೇಲ್ಕಂಡ ನ್ಯಾಯಾಲಯಗಳ ಆದೇಶವನ್ನು ಜಿಲ್ಲಾಧಿಕಾರಿಗಳ ಲಾಗಿನ್‌ನಲ್ಲಿ ಪುಶ್ ಮಾಡಲು ಆದೇಶ ಹೊರಡಿಸಲಾಗಿದ್ದರೂ ಜಿಲ್ಲಾಧಿಕಾರಿಗಳ ಕಚೇರಿಗಳಲ್ಲೂ ನ್ಯಾಯಾಲಯಗಳ ಆದೇಶಗಳನ್ನು ಪುಶ್ ಮಾಡಲು 06 ರಿಂದ 12 ತಿಂಗಳವರೆಗೆ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>ಸರ್ವೋಚ್ಚ ನ್ಯಾಯಾಲಯ/ ಉಚ್ಚ ನ್ಯಾಯಾಲಯ /ಕೆ ಎ ಟಿ/ಜಿಲ್ಲಾ ಮಟ್ಟದ ಸಿಎಲ್ ನ್ಯಾಯಾಲಯ ಗಳು ಹೊರಡಿಸುವ ಆದೇಶಗಳನ್ನು ಅನುಷ್ಠಾನಗೊಳಿಸಲು ಕೋರ್ಟ್ ಮಾಡ್ಯುಲ್ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ತಂತ್ರಾಂಶದಲ್ಲಿ ಯಾವುದೇ ಲೋಪ ದೋಷವಿರುವುದು ಕಂಡುಬಂದಿರುವುದಿಲ್ಲ. |
| ಆ | ಬಂದಿದ್ದಲ್ಲಿ, ಸದರಿ ಕಾರ್ಯವನ್ನು ಒಂದು ವಾರದೊಳಗೆ ಪೂರ್ಣಗೊಳಿಸುವ ಬಗ್ಗೆ ಏನಾದರೂ ಕ್ರಮ ಕೈಗೊಳ್ಳ ಲಾಗುತ್ತದೆಯೇ; (ವಿವರ ನೀಡುವುದು) | ಕೋರ್ಟ್ ಮಾಡ್ಯುಲ್ ತಂತ್ರಾಂಶದಲ್ಲಿ ಯಾವುದೇ ನಿರ್ದಿಷ್ಟ ಕಾಲಮಿತಿ ನಿಗಧಿಪಡಿಸಿರುವುದಿಲ್ಲ, ತಹಶೀಲ್ದಾರ್ / ಉಪವಿಭಾಗಾಧಿಕಾರಿಗಳು / ಜಿಲ್ಲಾಧಿಕಾರಿಗಳು ತ್ವರಿತವಾಗಿ ಇತ್ಯರ್ಥಪಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. |
| ಇ | ಸರ್ಕಾರವು ಭೂ ಸುಧಾರಣಾ ಕಾಯ್ದೆ ಕಲಂ 79ಎ ಮತ್ತು 79ಬಿ ಗಳನ್ನು ರದ್ದುಪಡಿಸಿದ್ದು, ಹಿಂದೆ ಸದರಿ ಕಾಯ್ದೆ ಉಲ್ಲಂಘನೆಯಾಗಿದೆಯೆಂದು ಜಮೀನು ಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿದ್ದು, ಅಂತಹ ಪ್ರಕರಣ ಗಳಲ್ಲಿ ಭೂ ಮಾಲೀಕರು ಕೆ ಎ ಟಿ ಅಥವಾ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿ ಆದೇಶ ಪಡೆದುಕೊಂಡು ಬಂದಂತಹ ಪ್ರಕರಣಗಳಲ್ಲೂ ಸಹ ನ್ಯಾಯಾಲಯದ ಆದೇಶಗಳನ್ನು ಜಿಲ್ಲಾಧಿಕಾರಿಗಳ ಲಾಗಿನ್‌ನಲ್ಲಿ ಪುಶ್ ಮಾಡಬೇಕಾಗಿದ್ದು, ರಾಮನಗರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ತುರ್ತಾಗಿ | ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಕಲಂ 79ಎ ಮತ್ತು 79ಬಿ ಉಲ್ಲಂಘಿಸಿರುವ ಪ್ರಕರಣ ಗಳಲ್ಲಿ ಉಪವಿಭಾಗಾಧಿಕಾರಿಗಳು ವಿಚಾರಣೆ ನಡೆಸಿ ಜಮೀನುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಹೊರಡಿಸಿರುವ ಉಪವಿಭಾಗಾಧಿಕಾರಿ ರವರ ಆದೇಶ ವಿರುದ್ಧ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದಲ್ಲಿ ಮೇಲ್ಮನವಿ ಸಲ್ಲಿಸಿ, ನ್ಯಾಯಾಧಿಕರಣವು ಉಪವಿಭಾಗಾಧಿಕಾರಿಗಳ ಆದೇಶವನ್ನು ರದ್ದುಪಡಿಸಿ ಆದೇಶ ಹೊರಡಿಸಿದ ಸಂದರ್ಭದಲ್ಲಿ ನ್ಯಾಯಾಧಿಕರಣದ ಆದೇಶವನ್ನು ಅನುಷ್ಠಾನಗೊಳಿಸಲು ಕೋರ್ಟ್ ಮ್ಯಾಡ್ಯುಲ್ ತಂತ್ರಾಂಶದ ಮೂಲಕ ಪುಶ್ ಮಾಡಬೇಕಾಗಿರುತ್ತದೆ.<br>ಹೀಗೆ ಪುಶ್ ಮಾಡುವಾಗ ಪ್ರಸ್ತುತ RTC ಮತ್ತು Ownership ಸ್ಥಿತಿಗತಿಗಳ ಬಗ್ಗೆ ವರದಿ ಪಡೆದು ಕ್ರಮ |

-2-

| | | |
|---|---|---|
| | ಪುಶ್ ಮಾಡುವ ಬದಲು ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿದೆಯೇ; ಯಾರ ಹೆಸರಿಗೆ ಖಾತೆ ದಾಖಲಿಸಬೇಕು ಎಂಬ ಬಗ್ಗೆ ವರದಿ ಕೋರಿ ಉಪವಿಭಾಗಾಧಿಕಾರಿಗಳ ಕಚೇರಿಗೆ ಮತ್ತು ತಹಶೀಲ್ದಾರ್‌ರವರ ಕಚೇರಿಗೆ ಪತ್ರ ಬರೆಯುತ್ತಿದ್ದು, ಇದರಿಂದ ನ್ಯಾಯಾಲಯದ ಆದೇಶದಂತೆ ಖಾತೆ ಬದಲಾವಣೆ ಮಾಡಿಸಿಕೊಳ್ಳಲು ವರ್ಷಗಳೇ ಕಳೆಯುತ್ತಿರುವುದರಿಂದ ಕಲಂ 79ಎ ಮತ್ತು 79ಬಿ ಸಂಬಂಧ ಕೆ ಎ ಟಿ ಅಥವಾ ಉಚ್ಛ ನ್ಯಾಯಾಲಯ ಹೊರಡಿಸುವ ಆದೇಶಗಳನ್ನು ತುರ್ತಾಗಿ ಅನುಷ್ಠಾನ ಗೊಳಿಸಲು ಏನಾದರೂ ಕ್ರಮ ಕೈಗೊಳ್ಳಲಾಗುವುದೇ [ಮಾಹಿತಿ ನೀಡುವುದು] | ವಹಿಸಲಾಗುತ್ತಿದೆ ಹಾಗೂ ಕರ್ನಾಟಕ ಭೂ ಸುಧಾರಣಾ ಕಾಯ್ದೆ1961ರ ಕಲಂ 79ಎ ಮತ್ತು 79ಬಿ ಉಲ್ಲಂಘಿಸಿರುವ ಪ್ರಕರಣಗಳಲ್ಲಿ ಉಪವಿಭಾಗಾಧಿಕಾರಿಗಳು ವಿಚಾರಣೆ ನಡೆಸಿ ಮುಟ್ಟುಗೋಲು ಹಾಕಿಕೊಳ್ಳಲಾದ ಪ್ರಕರಣಗಳಲ್ಲಿ ಉಪವಿಭಾಗಾಧಿಕಾರಿರವರ ಆದೇಶವನ್ನು ನ್ಯಾಯಾಧಿಕರಣವು ರದ್ದುಪಡಿಸಿದ ಸಂದರ್ಭದಲ್ಲಿ "ಕರ್ನಾಟಕ ಸರ್ಕಾರ" ಎಂಬುದನ್ನು ತೆಗೆದು ಕ್ರಯದಾರರ ಹೆಸರಿಗೆ ಖಾತೆ ನಮೂದಿಸಬೇಕಾಗಿರುತ್ತದೆ. ಆದರೆ ಕ್ರಯದಾರರ ಮಾಹಿತಿಯು ಈ ಕಛೇರಿಯಲ್ಲಿ ಲಭ್ಯವಿರುವುದಿಲ್ಲವಾದ್ದರಿಂದ, ನಿಗಧಿತ ಚೆಕ್‌ಲಿಸ್ಟನಲ್ಲಿ ಪೂರ್ಣ ಮಾಹಿತಿಯನ್ನು ತಹಶೀಲ್ದಾರರಿಂದ ಪಡೆದು ನಂತರ ತಂತ್ರಾಂಶದಲ್ಲಿ ಪುಶ್ ಮಾಡಬೇಕಾಗಿರುತ್ತದೆ.<br><br>ಪ್ರಸ್ತುತ ರಾಮನಗರ ಜಿಲ್ಲೆಯಲ್ಲಿ ಉಪವಿಭಾಗಾಧಿಕಾರಿಗಳ ವರದಿ ಬಂದ ನಂತರ ಕೋರ್ಟ್ ಮಾಡ್ಯೂಲ್ ತಂತ್ರಾಂಶದಲ್ಲಿ ಪುಶ್ ಮಾಡಲಾಗುತ್ತಿದೆ. |

ಕಂಇ 55 ಎಂಆರ್‌ಆರ್ 2023

(ಆರ್. ಅಶೋಕ)
ಕಂದಾಯ ಸಚಿವರು